ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಲಿಪಿಕ(1)147/2019-20

ದಿನಾಂಕ:04.08.2020

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಕಚೇರಿ ಅಧೀಕ್ಷಕರ ಹುದ್ದೆಗೆ ಪೂರ್ವಾನ್ವಯವಾಗಿ ಸ್ಥಾನಪನ್ನ ಪದೋನ್ನತಿ ನೀಡಿ ಸ್ಥಳ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:
1. ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಲಿಪಿಕ(1)263/2015-16, ದಿನಾಂಕ:01.06.2016.
2. ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡವಳಿ ದಿನಾಂಕ:22.07.2020
3. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯರುಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಕಾಯ್ದೆ-2011 ಮತ್ತು ತಿದ್ದುಪಡಿ ಆದೇಶ 2013ರ

* * * * *

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕ/ಶೀಘ್ರಲಿಪಿಗಾರರುಗಳಿಗೆ ಉಲ್ಲೇಖ(1)ರ ಅನ್ವಯ ಕಲ್ಯಾಣ ಕರ್ನಾಟಕ ಭಾಗದ ಜೇಷ್ಠತಾ ಸಂಖ್ಯೆ:01 ರಿಂದ 75 ಹಾಗೂ ಕಲ್ಯಾಣ ಕರ್ನಾಟಕ ಹೊರತುಪಡಿಸಿ 01 ರಿಂದ 599 ರವರೆಗೆ ಸ್ಥಾನಪನ್ನ ಪದೋನ್ನತಿ ನೀಡಲಾಗಿದೆ.

ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದ ಹಿನ್ನೆಲೆಯಲ್ಲಿ ಪದೋನ್ನತಿಯನ್ನು ತಡೆಹಿಡಿದು ಮುಚ್ಚಿದ ಲಕೋಟೆಯಲ್ಲಿರಿಸಲಾಗಿತ್ತು. ಇಲಾಖಾ ವಿಚಾರಣೆ ಪೂರ್ಣಗೊಂಡು ದೋಷಮುಕ್ತರಾಗಿರುವುದರಿಂದ ದಿನಾಂಕ:01.06.2016 ರಿಂದ ಪೂರ್ವಾನ್ವಯವಾಗಿ ವೇತನ ಶ್ರೇಣಿ ರೂ.20000-500-21000-600-24600-700-28800-800-33600-900-36300 ರಲ್ಲಿ ಕಛೇರಿ ಅಧೀಕ್ಷಕರ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ ನಿಯಮ 42(ಬಿ) ರಂತೆ ಸ್ಥಾನಪನ್ನ ಪದೋನ್ನತಿ ನೀಡಿದೆ.

**ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಆರ್ಥಿಕ ಸೌಲಭ್ಯ ಪಡೆಯುವ ಷರತ್ತಿಗೊಳಪಟ್ಟಿದೆ.**

| ಕ್ರ. ಸಂ | ಜ್ಯೇಷ್ಠತೆ ಸಂಖ್ಯೆ | ಪ್ರ.ದ.ಸಹಾಯಕರ ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಸಮಾಲೋಚನೆಯಲ್ಲಿ ಆಯ್ಕೆ ಮಾಡಿಕೊಂಡಂತೆ ಕಛೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ ನೀಡಿ ನಿಯಕ್ತಿಗೊಳಿಸಿ ನೇಮಿಸಿರುವ ಸ್ಥಳ |
|---|---|---|---|
| 1 | 289 | ಅಬೂಬಕ್ಕರ್ ಸಿದ್ದಿಕ್, ಪ್ರ.ದ.ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು. |

**ಸಮಾಲೋಚನೆ ಮೂಲಕ ನೇಮಕ ಮಾಡಿದ ಸ್ಥಳದಲ್ಲಿ ನೇರವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಿದೆ.**

**ನಿಬಂಧನೆಗಳು:**

1. ಪದೋನ್ನತಿ ಬಗ್ಗೆ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಆಕ್ಷೇಪಣೆ ಬಂದಲ್ಲಿ ಅದನ್ನು ರದ್ದುಪಡಿಸುವ ಅಧಿಕಾರ ಈ ನಿರ್ದೇಶನಾಲಯಕ್ಕೆ ಇರುತ್ತದೆ.

2. ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪದೋನ್ನತಿ ನೀಡಿರುವ ಯಾವುದೇ ನೌಕರರ ಜೇಷ್ಠತೆಯಲ್ಲಿ ಕಿರಿಯವರಾಗಿರುವುದು ಕಂಡುಬಂದಲ್ಲಿ ಅಂತಹ ನೌಕರರ ಪದೋನ್ನತಿಯನ್ನು ಯಾವುದೇ ಮುನ್ಸೂಚನೆ ಅಥವಾ ಕಾರಣ ತಿಳಿಸದೇ ಹಿಂಪಡೆಯುವ/ರದ್ದುಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ ಹಾಗೂ ಯಾವುದೇ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದು ಕಂಡುಬಂದಲ್ಲಿ ಸಂಬಂದಿಸಿದ ನೌಕರರ ಪದೋನ್ನತಿಯನ್ನು ಹಿಂಪಡೆಯಲಾಗುವುದು.



Scanned by CamScanner

3. ಪದೋನ್ನತಿ ಹೊಂದಿರುವ ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡಿ ನೇಮಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯದ ಮೇಲೆ ಹಾಜರಾಗುವಂತೆ ಸಂಬಂಧಪಟ್ಟ ನೌಕರರುಗಳಿಗೆ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಆದೇಶಿಸಿದೆ.

4. ಪದೋನ್ನತಿ ನೀಡಿ ನೇಮಕ ಮಾಡಿರುವ ನೌಕರರು ಈ ಆದೇಶ ಹೊರಡಿಸಿರುವ ದಿನಾಂಕದಿಂದ ಏಳು(07) ದಿನದೊಳಗಾಗಿ ನೇಮಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಹಾಜರಾತಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ. ತಪ್ಪಿದಲ್ಲಿ, ಅಂತಹ ನೌಕರರ ಪದೋನ್ನತಿ ಆದೇಶವನ್ನು ಯಾವುದೇ ಮುನ್ಸೂಚನೆ ನೀಡದೆ ಹಿಂಪಡೆಯಲಾಗುವುದು.

5. ಪದೋನ್ನತಿ ಹೊಂದಿ ನೇಮಕಗೊಂಡು ಸ್ಥಳ ನಿಯುಕ್ತಿ ಹೊಂದಿದ ನೌಕರರುಗಳ ಸ್ಥಳ ಮಾರ್ಪಾಡು ಕೋರಿ ಸಲ್ಲಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಯಾವುದೇ ಶಿಫಾರಸ್ಸು/ಒತ್ತಡಗಳನ್ನು ತರತಕ್ಕದ್ದಲ್ಲ.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ. ಸೇವೆಗಳು,
ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
2. ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
3. ಆಡಳಿತಾಧಿಕಾರಿಗಳು(ಸಾಮಾನ್ಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
4. ಕಛೇರಿ ಅಧೀಕ್ಷಕರು, ನಗದು ವಿಭಾಗ/ಎಂಎನ್ಎಸ್ ಸಂಕಲನ/ಆಡಳಿತ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
5. ಅಬೂಬಕ್ಕರ್ ಸಿದ್ದಿಕ್, ಪ್ರ.ದ.ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು–ಸದರಿ ಪದೋನ್ನತಿ ಆದೇಶವನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
7. ಆದೇಶ ಪ್ರತಿ/ ಕಛೇರಿ ಪ್ರತಿ

Scanned by CamScanner